ಬದುಕು ಬದಲಿಸಿದ

# ಭಾವೇಶ್ ಭಾಟಿಯಾ

## ಅಂಧ ಉದ್ಯೋಗ ಜನಕನ ಸಾಹಸಗಾಥೆ

■ ನೇಮಿಚಂದ್ರ

ಕಲೆ: ಮನೋಹರ ಕೆ. ಆಚಾರ್ಯ



## ಹರಿದುಬಂತು ಹೃದಯವಂತಿಕೆಯ ಮಹಾಪೂರ

ಆಹ್ವಾನ ಬಂದೆಡೆಗೆ ಹೋದ ಪ್ರದರ್ಶನಗಳಲ್ಲಿ, ಅಲ್ಲಿ ಬಂದ ಎಲ್ಲ ವ್ಯಕ್ತಿಗಳೊಡನೆ ಭಾವೇಶ್ ಮತ್ತು ನೀತಾ ದಂಪತಿ ಮಾತನಾಡುವರು, ಪರಿಚಯ ಮಾಡಿಕೊಳ್ಳುವರು. ಅಲ್ಲಿ ಕೇವಲ ಗ್ರಾಹಕರು ಮಾತ್ರ ಇರುತ್ತಿರಲಿಲ್ಲ, ಅನೇಕ ಸಪ್ಲೈಯರ್ಸ್ ಕೂಡಾ ಬಂದಿರುತ್ತಿದ್ದರು. ಯಾರೋ ಮೇಣದ ಯಾವುದೋ ಕೆಲಸದಲ್ಲಿ ತೊಡಗಿದ್ದರೆ, ಇನ್ಯಾರೋ ದಾರ ತಯಾರಿಕೆಯಲ್ಲಿದ್ದರು. ಮತ್ಯಾರೋ ಪ್ಯಾಕೇಜಿಂಗ್ ಕೆಲಸದಲ್ಲಿ ತೊಡಗಿದವರು ಬಂದಿರು ತ್ತಿದ್ದರು. ಇವರ ಪರಿಚಯ ಅವರ ಉದ್ಯಮಕ್ಕೆ ಮುಂದೆ ನಡೆದಂತೆ ಬಹಳ ಉಪಯೋಗಕ್ಕೆ ಬರುತ್ತಿತ್ತು.

ಮೊದಲ ಬಾರಿ 'ಸನ್‌ರೈಸ್ ಕ್ಯಾಂಡಲ್ಸ್' ಶುರುವಾದಾಗ, ಅವರು ರಿಟೇಲರ್‌ನಿಂದ ಕಚ್ಚಾ ಮಾಲು ತೆಗೆದುಕೊಳ್ಳುತ್ತಿದ್ದರು. ನಂತರದ ದಿನಗಳಲ್ಲಿ ಹೋಲ್ಸೇಲರ್, ಸಗಟು ವ್ಯಾಪಾರಿಗಳೊಡನೆ ಸಂಪರ್ಕವಾಯಿತು. ಬೇರೆ ಬೇರೆ ನಗರಗಳಲ್ಲಿ ಈ ಪ್ರದರ್ಶನಗಳಲ್ಲಿ ಭಾಗಿಯಾಗುವಂತೆ ನೀತಾ ಪ್ರೇರೇಪಿಸಿದ ಮೇಲೆ, ಈ ಮೋಂಬತ್ತಿ ತಯಾರಿಕೆಯಲ್ಲಿ ತೊಡಗುವ ಎಲ್ಲ ಕಚ್ಚಾ ಮಾಲುಗಳ ತಯಾರಕರನ್ನು ನೇರವಾಗಿ ತಲುಪಲು ಸಾಧ್ಯವಾಯಿತು. ಇದರಿಂದ ತಯಾರಿಕೆಯ ಖರ್ಚು ಕಡಿಮೆಯಾಗತೊಡಗಿತು.

ಮ್ಯಾನೇಜ್‌ಮೆಂಟ್‌ನ ಮೊದಲ ಸೂತ್ರವೇ ಗುಣಮಟ್ಟವನ್ನು ಇಳಿಸದೆ, ತಯಾರಿಕೆಯ ಖರ್ಚನ್ನು ಕಡಿಮೆ ಮಾಡುವುದು ಹೇಗೆ ಎಂಬುದು? ನೀತಾರ ಸಹಾಯದಿಂದ ಭಾವೇಶ್ ಈಗ ಮತ್ತಷ್ಟು ಬಿಸಿನೆಸ್ ಪಾಠಗಳನ್ನು ಪ್ರಾಯೋಗಿಕವಾಗಿ ಕಲಿಯುತ್ತಿದ್ದರು. ಬರೀ ಕಲಿಯುವುದಲ್ಲ, ತಕ್ಷಣವೇ ಅಳವಡಿಸುತ್ತಿದ್ದರು. ನೀತಾ ಅವರ ದೂರದೃಷ್ಟಿ ಮತ್ತು ಸತತ ಪ್ರಯಾಸ ಉದ್ಯಮ ಮೇಲೇರಲು ಮೆಟ್ಟಿಲು ಹಾಕಿತ್ತು.

ಇದೀಗ ಮೋಂಬತ್ತಿ ತಯಾರಿಕೆಗೆ ಬೇಕಾದ ಎಲ್ಲ ಕಚ್ಚಾ ವಸ್ತುಗಳ ತಯಾರಕರನ್ನು ನೀತಾ ಹುಡುಕಿಟ್ಟರು. ತಯಾರಕರೊಡನೆ ನೇರ ಸಂಬಂಧ ವನ್ನು ಬೆಳೆಸಿಕೊಂಡರು. ಇಂದು ಸನ್‌ರೈಸ್ ಕ್ಯಾಂಡಲ್ಸ್‌ನಲ್ಲಿ ಅಳವಡಿಸುವ ಬತ್ತಿಯ ದಾರ, ಸೀದಾ ಚೆನ್ನೈನಿಂದ ಬರುತ್ತದೆ. ಮೇಣ 'ಇಂಡಿಯನ್ ಆಯಿಲ್ ರಿಫೈನರಿ'ಗಳಿಂದ ಬರುತ್ತದೆ. ಜೊತೆಗೇ ಜೇನಿನ ಮೇಣವನ್ನು ನೇರವಾಗಿ ಜೇನು ಸಾಕುವ ರೈತರಿಂದ ಪಡೆಯುತ್ತಾರೆ. ಬಣ್ಣಗಳು, ಪ್ಯಾಕೇಜಿಂಗ್‌ಗೆ ಬೇಕಾದ ವಸ್ತುಗಳು, ಪರಿಮಳಗಳು ಇವೆಲ್ಲವನ್ನು ಸೀದಾ ತಯಾರಕರಿಂದ ತೆಗೆದುಕೊಳ್ಳುತ್ತಿದ್ದಾರೆ. ಇದೀಗ ಕಚ್ಚಾ ವಸ್ತುಗಳ ಖರೀದಿಯ ಪೂರ್ಣ ಜವಾಬ್ದಾರಿ ನೀತ ತಮ್ಮ ಹೆಗಲಲ್ಲಿ ಹೊತ್ತಿದ್ದಾರೆ.

ನೀತಾ ಅವರ ವಾಣಿಜ್ಯ ಪದವಿ ಬಹಳ ಉಪಯೋಗಕ್ಕೆ ಬಂದಿತು. ದಿಟವಾಗಿ ನೋಡಿದರೆ, ಓದಿದ್ದೆಲ್ಲವೂ ಉಪಯೋಗಕ್ಕೆ ಬರುವುದು ಅಳವಡಿಸಿದಾಗ. ನಾವು ಏನೆಲ್ಲ ಡಿಗ್ರಿಗಳನ್ನು ಗುಡ್ಡೆ ಹಾಕಿಕೊಂಡು ಕೈ ಕಟ್ಟಿ ಕುಳಿತರೆ ಅವು ಏನೊಂದೂ ಉಪಯೋಗಕ್ಕೆ ಬಾರವು. ಕಲಿತ ಪಾಠಗಳನ್ನು, ಓದಿದ್ದೆಲ್ಲವನ್ನು ಉಪಯೋಗಿಸುವ ಮಾರ್ಗಗಳನ್ನು ನಾವು ಕಂಡುಕೊಳ್ಳಬೇಕು. ನೀತಾ ಸನ್‌ರೈಸ್ ಕ್ಯಾಂಡಲ್ಸ್‌ನ ಬ್ಯಾಂಕಿಂಗ್ ಅಕೌಂಟ್ ಎಲ್ಲವನ್ನೂ ಪೂರ್ಣ ಸಂಭಾಳಿಸಿದರು. ಇದರೊಡನೆ, ಪತಿ, ಮಗು ಮತ್ತು ಮಾವನವರನ್ನು ನೋಡಿಕೊಳ್ಳುವುದು, ಅಡುಗೆ ಮಾಡುವುದು, ಅದೆಷ್ಟು ಪಾತ್ರಗಳಲ್ಲಿ ನೀತಾ ದುಡಿದರು ಅವರಿಗೇ ಎಣಿಕೆ ತಪ್ಪಿತ್ತು. ಅಷ್ಟು ಶ್ರೀಮಂತರ ಮನೆಯಲ್ಲಿ ಏಕಮಾತ್ರ ಪುತ್ರಿಯಾಗಿ ಬೆಳೆದ ಈ ಹುಡುಗಿ ತಾನೇ ಆಯ್ದುಕೊಂಡ ಈ ಹಾದಿಯ ಬದುಕಿನ ಕಷ್ಟಗಳ ಬಗ್ಗೆ ಒಮ್ಮೆ ಕೂಡಾ ದೂರು ಹೇಳಲಿಲ್ಲ. ಒಮ್ಮೆ ಕೂಡಾ ಅವರು ಪಶ್ಚಾತ್ತಾಪ ಪಡಲಿಲ್ಲ.

ಇಂದು ನೀತಾ ಯಾವುದೇ ಚತುರ್ಚಕ್ರ ವಾಹನ ವನ್ನು ಆರಾಮಾಗಿ ಓಡಿಸುವರು. ಮುಂಬಯಿ ಪುಣೆಗೆ ಕಾರು ಓಡಿಸಿಕೊಂಡು ಹೋಗುವುದು ಅವರಿಗೆ ಆಟದಷ್ಟು ಸಲೀಸಾಗಿದೆ. ಭಾವೇಶ್ ಅಂತೂ ತಮ್ಮ ಬದುಕಿನ ಸ್ಟಿಯರಿಂಗ್ ವ್ಹೀಲ್ ಅನ್ನು ಎಂದೋ ನೀತಾ ಅವರ ಕೈಗೆ ಕೊಟ್ಟು ಬಿಟ್ಟಿದ್ದಾರೆ. ಪತಿಪತ್ನಿಯರ ಸಂಬಂಧ ಏಳೇಳು ಜನ್ಮದ್ದು ಎನ್ನುತ್ತಾರೆ. ಭಾವೇಶ್ ನಗೆಯಾಡಿ ಹೇಳುತ್ತಾರೆ, 'ನೀತಾಗೆ ಅಭ್ಯಂತರ ಇಲ್ಲದಿದ್ದರೆ, ಆ ಏಳರ ಮುಂದೆ ಒಂದು ಸೊನ್ನೆ ಹಾಕಲು ಬಯಸುತ್ತೇನೆ'. ಅವರ ಎದೆ ಇಂದು ಗರ್ವದಿಂದ ಹಿಗ್ಗಿದೆ. ನೀತಾ ಅವರ ತವರು ಮನೆಯವರು, 'ನೀತಾ ಕುರುಡನನ್ನು ಮದುವೆ ಮಾಡಿಕೊಂಡು ಆತ್ಮಹತ್ಯೆ ಮಾಡಿಕೊಂಡಳು' ಎನ್ನುವವರೆಗೂ ಆಡಿಬಿಟ್ಟಿದ್ದರು. ಎಲ್ಲರಿಗೂ ನೀತಾರ ಈ ನಿರ್ಧಾರ ಹುಚ್ಚಾಗಿ ಕಂಡಿತ್ತು. ಇಂದು ಅದೇ ಸಂಬಂಧಿಗಳು, ನೀತಾ ಮತ್ತು ಭಾವೇಶ್ ಅವರನ್ನು ಭೇಟ್ಟಿಯಾಗಲು ಬಂದಾಗ, ಒಂದು